**O.S. 282-17** **PW : 1**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 1 ರಿಂದ 3 ಹಾಗೂ 5 ಹಾಗೂ 6 ರ ಪರ ಶ್ರೀ R G D, ವಕೀಲರಿಂದಃ**

6. ದಾವಾ ಶೆಡ್ಯೂಲ್ - ಬಿ-3 ಶೀಲವಂತ ಓಣಿಯಲ್ಲಿರುವ ಸಿ ಟಿ ಎಸ್ ನಂಃ 130 ಹೆಚ್ ದಿಂದ ಜಿ ವರೆಗೆ ನಿಪಿ.10 ರಿಂದ 15 ರವರ ಆಸ್ತಿಗಳು ಶೀಲವಂತರ ಓಣಿಯಲ್ಲಿವೆ ಅಂದರೆ ಸರಿ. ಇವೆಲ್ಲ ಹಳೆ ಆಸ್ತಿಗಳು ಒಂದಕ್ಕೊಂದು ಹತ್ತಿಕೊಂಡಿವೆ ಅಂದರೆ ಸರಿ. ಅವೆಲ್ಲವುಗಳನ್ನು ಕೆಡವಿ ಬಸವರಾಜ ಪ್ಲಾಜಾ ಅಂತಾ ಅಪಾರ್ಟಮೆಂಟ ಕಟ್ಟಿಸಿದ್ದೇವೆ ಅಂದರೆ ಸರಿ. ಈಗ ಸದರಿ ಅಪಾರ್ಟಮೆಂಟಿಗೆ ಸಂಬಂಧಪಟ್ಟ ಪೊಟೋ ಗಳನ್ನು ತೋರಿಸಲಾಗಿ ಸಾಕ್ಷಿ ಒಪ್ಪಿಕೊಂಡಿದ್ದರಿಂದ ಸದರಿ ಎರಡು ಪೊಟೋಗಳನ್ನು ನಿಡಿ.13 ಹಾಗೂ 14 ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಸಿ ಟಿ ಎಸ್ ನಂಃ 1301 ಹೆಚ್, ಜೆ, ಕೆ, ಎಲ್ ಮುಟೇಶನ್ ಗಳ ಪ್ರತಿ ತೋರಿಸಲಾಗಿ ಸಾಕ್ಷಿ ಅವುಗಳನ್ನು ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಗಳನ್ನು ನಿಡಿ.15 ರಿಂದ 18 ಎಂದು ಗುರುತಿಸಲಾಯಿತು. ಅಪಾರ್ಟಮೆಂಟ ಕಟ್ಟಿ ಅದರಲ್ಲಿರುವ ಮನೆ, ಅಂಗಡಿ ಹಾಗೂ ಗೋಡೌನ್ ಮಾರಾಟ ಮಾಡಿದ್ದರು ಅಂದರೆ, ಎಲ್ಲಾ ಮಾರಾಟ ಮಾಡಿಲ್ಲವೆಂದು ಹೇಳುತ್ತಾರೆ. ಯಾವ ಆಸ್ತಿಗಳು ಮಾರಾಟ ಮಾಡದೇ ಇರುವುದು, ಅದರ ನಂಬರ ಗೊತ್ತಿಲ್ಲ. ಖರೀದಿದಾರರ ಹೆಸರುಗಳು ನಮೂದಾಗಿದೆ ಅಂದರೆ ಸರಿ. ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಕೆಲವು ಜನ ಬ್ಯಾಂಕಿನಿಂದ ಸಾಲ ಮಾಡಿ ಖರೀದಿ ಮಾಡಿದ್ದಾರೆ ಅಂದರೆ ಸರಿ. ಯಾವ ಯಾವ ಬ್ಯಾಂಕಿನಿಂದ ಸಾಲ ಪಡೆದುಕೊಂಡಿದ್ದಾರೆಂದು ಭೋಜಾ ಉತಾರದಲ್ಲಿ ನಮೂದಾಗಿದೆ ಅಂದರೆ ಸರಿ. ಶೀಲವಂತರ ಓಣಿಯಲ್ಲಿರುವ ಯಾವ ಆಸ್ತಿಗಳು ಉಳಿದಿಲ್ಲ, ಪಾಲು ಕೇಳಲು ಬರುವುದಿಲ್ಲ ಅಂದರೆ ಸರಿಯಲ್ಲ. ಕೆಲವೊಂದು ಆಸ್ತಿಗಳು ಮಾರಾಟ ಮಾಡದೇ ಉಳಿದಿವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಈಗ ಸಾಕ್ಷಿಗೆ ಬಿಡನಾಳ ಗ್ರಾಮದ ಸರ್ವೆ ನಂಃ 3 ಬ, ಪ್ಲಾಟ್ ನಂಃ 2 ನೇದ್ದರ ಪಹಣಿ ಪತ್ರಿಕೆ ತೋರಿಸಲಾಗಿ, ಸಾಕ್ಷಿಯೂ ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ.19 ಎಂದು ಗುರುತಿಸಲಾಯಿತು. ಅದು ಮೊದಲು ಖುಲ್ಲಾ ಜಾಗೆ ಇತ್ತು ಅಂದರೆ ಸರಿ. ಅಲ್ಲಿ ನಾವು ಗೋಡೌನ್ ಕಟ್ಟಿಸಿದ್ದೆವು ಅಂದರೆ ಸರಿ.

**O.S. 282-17** **PW : 1**

ಸದರಿ ಗೋಡೌನ್ ಗೆ ಸಂಬಂಧಪಟ್ಟಂತೆ ಒಂದು ಪೊಟೋ ತೋರಿಸಲಾಗಿ, ಸಾಕ್ಷಿ ಅದನ್ನು ಒಪ್ಪಿಕೊಂಡಿದ್ದರಿಂದ ಸದರಿ ಪೊಟೋವನ್ನು ನಿಡಿ.20 ಎಂದು ಗುರುತಿಸಲಾಯಿತು. ಸದರಿ ಗೋಡೌನ್ ನ್ನು ಇಂದಿರಾರಾಮ ಅಜಾರಾಮ ಚೌಧರಿ ಹಾಗೂ ಇತರರಿಗೆ ಮಾರಾಟ ಮಾಡಿದ್ದರು ಅಂದರೆ, ಖರೀದಿ ಪತ್ರ ತೋರಿಸಿದರೆ ಒಪ್ಪಿಕೊಳ್ಳುತ್ತೇನೆ. ಅವರ ಹೆಸರು ಉತಾರ ನಿಡಿ.19 ರಲ್ಲಿ ನಮೂದಾಗಿದೆ ಅಂದರೆ ಸರಿ. ಈಗ ಸಾಕ್ಷಿಗೆ ನಮೂನೆ -15 ತೋರಿಸಲಾಗಿ ಅದರಲ್ಲಿ ಭೋಜಾ ಸ್ಟೇಟ ಬ್ಯಾಂಕ ಆಫ್ ಹೈದರಾಬಾದ ಇದೆ ಅಂದರೆ ಸರಿ. ಸದರಿ ದಾಖಲೆಯನ್ನು ನಿಡಿ.21 ಎಂದು ಗುರುತಿಸಲಾಯಿತು. ಸದರಿ ದಾವೆಯಲ್ಲಿ ನಿಡಿ.21 ರಲ್ಲಿರುವ ಖರೀದಿದಾರರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಅಂದರೆ ಸರಿ. ಎಲ್ಲಾ ಗೋಡೌನ್ ಗಳನ್ನು ಮಾರಾಟ ಮಾಡಿದ್ದರಿಂದ ಆಸ್ತಿ ಉಳಿದಿಲ್ಲ ಅಂದರೆ ಸರಿಯಲ್ಲ. ಈ ಆಸ್ತಿಯಲ್ಲಿ ಪಾಲು ಕೇಳಲು ಬರುವುದಿಲ್ಲ ಅಂದರೆ ಸರಿಯಲ್ಲ.

**ಪ್ರತಿವಾದಿ - 5 ಹಾಗೂ 9 ನೇದ್ದರ ಶ್ರೀ ಎಸ್ ಆರ್ ಎ ವಕೀಲರು ಸಮಯ ಕೋರಿದ್ದರಿಂದ ಪಾಟೀ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.